# ಪುರಾತನ ಕಲ್ಲಿನ ಕಣಜ

ಚಿತ್ರದುರ್ಗದ ಕೋಟೆಯನ್ನು ಹತ್ತಿ, ನಡುದಾರಿಯಲ್ಲಿ ಒನಕೆ ಓಬವ್ವನ ಕಿಂಡಿಯ ಬಳಿ ಸಾಗಲು ಮೆಟ್ಟಿಲಿಳಿಯುವ ಮೊದಲು ಎಡಭಾಗಕ್ಕೆ ತಿರುಗಿ ಇನ್ನಷ್ಟು ಮೆಟ್ಟಿಲುಗಳನ್ನು ಹತ್ತಿದರೆ ಗೋಪಾಲಸ್ವಾಮಿ ಹೊಂಡ ಕಾಣಸಿಗುತ್ತದೆ. ಹಾಗೆಯೇ ಕೋಟೆಯ ಉತ್ತುಂಗ ತಲುಪಿದರೆ ಗೋಪಾಲಕೃಷ್ಣ ದೇವಾಲಯ ಸಿಗುತ್ತದೆ. ಇವೆರಡು ತಾಣಗಳ ನಡುವೆ ಉರುಟಾದ ಗೋಡೆಗಳ ಎರಡು ಕಲ್ಲಿನ ಬಾವಿಯ ದಂಡೆಯಂತಹ ರಚನೆಗಳು ಗಮನಸೆಳೆಯುತ್ತವೆ. ಆದರೆ ಈ ರಚನೆಗಳ ಬಗ್ಗೆ ಮಾಹಿತಿ ಫಲಕದಲ್ಲಿ ವಿವರಣೆಯಿಲ್ಲ.

ಈ ಬಗ್ಗೆ ದೇವಾಲಯದ ಸಿಬ್ಬಂದಿಯನ್ನು ಕೇಳಿದಾಗ, ‘ಅವು ಹಿಂದಿನ ಕಾಲದಲ್ಲಿ ರಾಜಮನೆತನದವರು ನಿರ್ಮಿಸಿದ ದವಸ ಧಾನ್ಯಗಳ ಕಣಜಗಳಂತೆ’ ಎಂದರು. ಸುಮಾರು 10 ಮೀಟರ್ ವ್ಯಾಸ, 4 ಮೀಟರ್ ಎತ್ತರದ ಪುರಾತನ ಕಣಜದ ಗೋಡೆಯಲ್ಲೊಂದು ಕಿಂಡಿಯನ್ನೂ ಗಮನಿಸಬಹುದಾಗಿದೆ. ಈಗ ಬಿರುಕು ಬಿಟ್ಟು ಒಳಭಾಗದಲ್ಲಿ ಸಸ್ಯಗಳು ಬೆಳೆದಿರುವ ಇದರ ಗೋಡೆಯಲ್ಲಿ ಕಲ್ಲುಗಳ ನಡುವಿನ ಅಂತರದಲ್ಲಿ ಪ್ಲಾಸ್ಟರ್ ಮಾಡಿರುವ ಕುರುಹು ಇದೆ. ಆದರೆ ಕಣಜದೊಳಗಿನ ದವಸ ಧಾನ್ಯಗಳಿಗೆ ನೀರು ಸೋಕದಂತೆ ಕಣಜದ ಮೇಲ್ಭಾಗ ಮತ್ತು ಕಿಂಡಿಯ ಭಾಗದಲ್ಲಿ ಹೇಗೆ ರಕ್ಷಿಸುತ್ತಿದ್ದರು ಎನ್ನುವುದು ಮಾತ್ರ ಸೋಜಿಗದ ಸಂಗತಿ. ಇವು ದುರ್ಗದ ಶೃಂಗಗಳಲ್ಲಿರುವ ಕಹಳೆ ಬತ್ತೇರಿಗಳನ್ನು ಹೋಲುತ್ತಿರುವುದು ಇನ್ನೊಂದು ವಿಶೇಷ.

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ





# ಕುಂದಾಪುರ ಕೋಡಿ ಸೀ ವಾಕ್

ಉಡುಪಿ ಜಿಲ್ಲೆಯ ಕುಂದಾಪುರ ಕೋಡಿ ಸೀ ವಾಕ್ ಪ್ರವಾಸಿಗರ ಆಕರ್ಷಣೀಯ ತಾಣ. ಜಿಲ್ಲಾಡಳಿತ ಮತ್ತು ಪ್ರವಾಸೋದ್ಯಮ ಇಲಾಖೆ ಕೆಲವು ವರ್ಷಗಳ ಹಿಂದೆ ಕೋಡಿ ಭಾಗದ ಬ್ರೇಕ್ ವಾಟರ್ ಅನ್ನು ಸೀ ವಾಕ್ ಆಗಿ ಅಭಿವೃದ್ಧಿಪಡಿಸಿತ್ತು. ವಾರಾಂತ್ಯ ಮತ್ತು ರಜಾ ದಿನಗಳಲ್ಲಿ ಸಾವಿರಾರು ಪ್ರವಾಸಿಗರು ಇಲ್ಲಿಗೆ ಆಗಮಿಸುತ್ತಿದ್ದು, ಮಲ್ಪೆ, ಮರವಂತೆ ಹೊರತುಪಡಿಸಿದರೆ ನಂತರದ ಆಕರ್ಷಕ ತಾಣವೆಂಬ ಪಾತ್ರಕ್ಕೂ ಕೋಡಿ ಸೀ ವಾಕ್ ಭಾಜನವಾಗಿದೆ. ಇದನ್ನು ರಹಸ್ಯ ರತ್ನಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ. ಕಡಲ ತೀರವು ಸುವರ್ಣ ನದಿ ಮತ್ತು ಸೀತಾ ನದಿ ಸಮುದ್ರವನ್ನು ಸಂಧಿಸುವ ಪ್ರದೇಶವೆಂದು ಗುರುತಿಸಲಾಗಿದೆ.

ಕೋಡಿ ಸೀ ವಾಕ್ 1 ಕಿ.ಮೀ. ಉದ್ದವಿದ್ದು, ಸಮುದ್ರ ಹಾಗೂ ನದಿಯ ನೀರಿನಿಂದ ಸುತ್ತುವರಿದಿದೆ. ಇಲ್ಲಿಗೆ ಬರುವ ಪ್ರವಾಸಿಗರಿಗೆ ತಾವು ಸಮುದ್ರಕ್ಕೆ ಕಾಲಿಡುತ್ತಿರುವಂತೆ ಭಾಸವಾಗುವ ಸುಂದರ ಸನ್ನಿವೇಶ ಸೃಷ್ಟಿಯಾಗುವ ಕಾರಣ ಸೂರ್ಯಾಸ್ತದ ಸೊಬಗನ್ನು ಸವಿಯಲು ಪ್ರವಾಸಿಗರ ದಂಡೇ ಇಲ್ಲಿಗೆ ಹರಿದು ಬರುತ್ತಿದೆ. ಎರಡೂ ಬದಿಯಲ್ಲಿ ರಕ್ಷಣಾ ಬೇಲಿ ನಿರ್ಮಿಸಲಾಗಿದೆ. ಪ್ರವಾಸಿಗರು ಕುಳಿತುಕೊಳ್ಳಲು ಕಲ್ಲಿನ ಬೆಂಚುಗಳು, ಬೆಳಕಿನ ವ್ಯವಸ್ಥೆಯನ್ನೂ ಮಾಡಲಾಗಿದೆ. ಸೀ ವಾಕ್‌ಗೆ ಬಂದ ಪ್ರವಾಸಿಗರಿಗಾಗಿ ಮೋಟರ್ ಬೈಕ್ ವ್ಯವಸ್ಥೆಯಿದೆ. ಹಿನ್ನೀರಿನಲ್ಲಿ ಸಾಗಲು ಟೂರಿಸ್ಟ್ ಬೋಟ್‌ಗಳು, ಕಯಾಕಿಂಗ್ ಸಾಹಸಯಾನ ವ್ಯವಸ್ಥೆಯೂ ಇದೆ. ಅಳಿವೆ ಬಾಗಿಲಿನಲ್ಲಿ ಡಾಲ್ಫಿನ್‌ಗಳ ದರ್ಶನ ಆಗುತ್ತದೆ.

ಇತ್ತೀಚೆಗೆ ಸಮುದ್ರದಲ್ಲಿ ಚಂಡಮಾರುತ ಎದ್ದಿರುವ ಕಾರಣಕ್ಕೆ ಅಳಿವೆ ಬಾಗಿಲಿನ ತುದಿಯಲ್ಲಿ ಸೀ ವಾಕ್‌ಗೆ ಹಾನಿಯಾಗಿದೆ. ಅಲ್ಲದೆ ಟೆಟ್ರಾಪೋಡ್ (ಕಾಂಕ್ರೀಟ್ ತಡೆಗೋಡೆ) ಕುಸಿದು ಸಮುದ್ರದ ಪಾಲಾಗುತ್ತಿದೆ. ಸೀ ವಾಕ್ ನೆಲದಲ್ಲಿ ಬಿರುಕುಬಿಟ್ಟಿದೆ. ಮುಂದಿನ ಮಳೆಗಾಲದ ಒಳಗೆ ಕಾರ್ಯವಾದರೆ, ಸಂಭಾವ್ಯ ಅವಘಡ ತಪ್ಪಲಿದೆ. ಸಂಬಂಧಿತ ಇಲಾಖೆ ಕೂಡಲೇ ಎಚ್ಚೆತ್ತುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂಬುದು ಸ್ಥಳೀಯರ ಆಗ್ರಹ.

—ಡಾ. ಕರವೀರಪ್ರಭು ಕ್ಯಾಲಕೊಂಡ, ಬಾದಾಮಿ